# ಕರ್ನಾಟಕ ಸರ್ಕಾರ

ಸಂ:ಗ್ರಾಅಪ 128 ಗ್ರಾನೀಸ (2) 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24.02.2015

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

**ಮಾನ್ಯರೆ,**

ವಿಷಯ: 2014-15ನೇ ಸಾಲಿನಲ್ಲಿ NRDWPಯ ಅನುಷ್ಠಾನಗೊಳಿಸುವ ಕಾಮಗಾರಿಗಳ ಪರಿವೀಕ್ಷಣೆ ಕುರಿತು.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 46 ಗ್ರಾನೀಸ(2)2014, ದಿನಾಂಕ:08.04.2014 ಮತ್ತು 17.10.2014.
ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 116 ಗ್ರಾನೀಸ(2)2012, ದಿನಾಂಕ:21.10.2013.

---

1. 2014-15ರ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನವಾಗಿ IMIS ನಲ್ಲಿ ಮತ್ತು ಗಾಂಧಿ ಸಾಕ್ಷಿ (GSK) ಕಾಯಕದಲ್ಲಿ ದಾಖಲಾಗುವುದನ್ನು ಪ್ರತಿನಿತ್ಯ ಉಸ್ತುವಾರಿ ಮಾಡಬೇಕು. ನಿಗದಿತ ಪ್ರಪತ್ರದಲ್ಲಿ RTGS ಮುಖೇನ ಅನುದಾನವನ್ನು ಗೊತ್ತುಪಡಿಸಿದ ಬ್ಯಾಂಕ್ ನಿಂದ **31.03.2015ರೊಳಗೆ** ನಿಯಮಾನುಸಾರ ಹಣ ಸೆಳೆಯಲು ಕ್ರಮವಹಿಸತಕ್ಕದ್ದು.

2. ಆರ್ಥಿಕ ವರ್ಷದ ಕೊನೆಗೆ ಬಂದಿರುವುದರಿಂದ ಮತ್ತು ಕುಡಿಯುವ ನೀರು ಸಮಸ್ಯೆ ನಿವಾರಿಸಲು ಕಾಮಗಾರಿಗಳ ಶೀಘ್ರ ಅನುಷ್ಠಾನದ ದೃಷ್ಟಿಯಿಂದ ಜಿಲ್ಲೆಗಳಿಗೆ ಕ್ರಿಯಾ ಯೋಜನೆಗಿಂತ ಹೆಚ್ಚಿನ ವೆಚ್ಚವಾಗಿದ್ದರೂ ಸಹ ಆಯಾ ಯೋಜನೆಯ ಅಂದಾಜು ಮೊತ್ತದ ಮಿತಿಯೊಳಗೆ ಬಿಲ್ ಪಾವತಿಗೆ 31.03.2015ರವರೆಗೆ ಮಾತ್ರ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅವಕಾಶ ಕಲ್ಪಿಸಿದೆ:

(i) ಸರ್ಕಾರದಿಂದ ಅನುಮೋದನೆಯಾಗಿರುವ NRDWP ಕ್ರಿಯಾ ಯೋಜನೆಯಲ್ಲಿರುವ ಕಾಮಗಾರಿಗಳಾಗಿ ಇರಬೇಕು

(ii)IMIS ನಲ್ಲಿ ಸೇರಿರಬೇಕು.

(iii)ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸಿರಬೇಕು.

3. ಈ ಷರತ್ತುಗಳನ್ನು ಪೂರೈಸಿದ ಕಾಮಗಾರಿಗಳ ಬಿಲ್‌ಗಳನ್ನು ಮಾತ್ರ authorization ಮಾಡಿ ಬ್ಯಾಂಕ್‌ಗೆ ಕಳುಹಿಸಬೇಕು. NRDWP ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗದಿರುವ ಅಥವಾ IMIS ನಲ್ಲಿ ದಾಖಲಾಗದಿರುವ ಅಥವಾ ಗಾಂಧಿಸಾಕ್ಷಿ ಕಾಯಕದಲ್ಲಿ ದಾಖಲಿಸದಿರುವ ಯಾವುದೇ ಬಿಲ್ಲನ್ನು authorization ಮಾಡಿ ಬ್ಯಾಂಕ್‌ಗೆ ಕಳುಹಿಸಬಾರದು.

4. ತಾವುಗಳು ಹಾಗೂ ತಮ್ಮ ಅಧೀನದಲ್ಲಿರುವ ಜವಾಬ್ದಾರಿಯುತ ಅಧಿಕಾರಿಯು ಫೆಬ್ರವರಿ ಮತ್ತು ಮಾರ್ಚ್ 2015ರ ತಿಂಗಳಲ್ಲಿ ವಿಲೇವಾರಿ ಮಾಡಿಸಲು ಮಂಡಿಸುವ ಬಿಲ್‌ಗಳಿಗೆ ಸಂಬಂಧಿಸಿದಂತೆ ವಾಸ್ತವವಾಗಿ ಅನುಮೋದಿತ ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನವಾಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

5. ಈ ಮೂಲಕ ಆರ್ಥಿಕ ಸಾಲಿನ ಅಂತ್ಯದಲ್ಲಿ ಯಾವುದೇ ನಕಲಿ ಬಿಲ್‌ಗಳು ಅಥವಾ ಅವ್ಯವಹಾರಕ್ಕೆ ಸಂಬಂಧಿಸಿದ ಬಿಲ್‌ಗಳು RTGS ಮುಖೇನ ಪಾವತಿಯಾಗದಂತೆ ಎಚ್ಚರಿಕೆ ವಹಿಸತಕ್ಕದೆಂದು ತಿಳಿಸಿದೆ.

ತಮ್ಮ ವಿಶ್ವಾಸಿ,

ಸಹಿ/–
(ಟಿ. ಎಂ. ವಿಜಯ್ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ರವರಿಗೆ:**

1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು–09.
2. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.
3. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು.
4. ಎಲ್ಲಾ (38) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಂಜಿನಿಯರಿಂಗ್ ವಿಭಾಗಗಳ ಆಡಿಟ್ ಆಫೀಸರ್‌ಗಳಿಗೆ.

**ಪ್ರತಿಯನ್ನು:**

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.

(ಟಿ.ಎಂ.ವಿಜಯ್ ಭಾಸ್ಕರ್)